(ಸಾಕ್ಷಿಗೆ ದಿನಾಂಕ: 30.11.2024 ರಂದು ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಪಾಟೀ ಸವಾಲುಃ ಶ್ರೀ ಕೆ.ಎನ್.ಎಸ್., 21 ರಿಂದ 25 ಮತ್ತು 31ನೇ ಪ್ರತಿವಾದಿಗಳ ಪರ ವಕೀಲರಿಂದಃ**

ದಿನಾಂಕಃ 18.01.1992ರ ಕ್ರಯ ಪತ್ರದ ಬಗ್ಗೆ ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸುವ ಪೂರ್ವದಲ್ಲಿ ತಿಳಿದುಬಂತೇ ಅಥವಾ ನಂತರದಲ್ಲಿ ತಿಳಿದುಬಂತೇ ಎಂದರೆ ಪ್ರಮಾಣ ಪತ್ರ ಸಲ್ಲಿಸಿದ ನಂತರ ತಿಳಿದು ಬಂದಿರುತ್ತದೆ ಎಂದು ನುಡಿಯುತ್ತೇನೆ. ನನ್ನ ತಂದೆ ಮತ್ತು ಚಿಕ್ಕಪ್ಪ ಪಾಪರಾಜುರವರು ಸೇರಿ ದಿನಾಂಕಃ 18.01.1992ರಂತೆ ಕ್ರಯಪತ್ರವನ್ನು 21 ರಿಂದ 25ನೇ ಪ್ರತಿವಾದಿಯರ ಮೂಲ ಪುರಷನಾದ ಲೇಟ್ ಪುಟ್ಟರಾಜುರವರ ಮಗ ನರಸರಾಜುರವರಿಗೆ ಬರೆದುಕೊಟ್ಟ ಸಮಯದಿಂದ ಸದರಿ ನರಸರಾಜು ಹಾಗೂ ಅವರ ನಂತರ 21 ರಿಂದ 25ನೇ ಪ್ರತಿವಾದಿಯರು ಸದರಿ ಸ್ವತ್ತಿನ ಸ್ವಾಧೀನದಲ್ಲಿದ್ದಾರೆ ಎಂದರೆ ಸದರಿ ಜಮೀನನ್ನು 21 ರಿಂದ 25ನೇ ಪ್ರತಿವಾದಿಯರೇ ಉಳುಮೆ ಮಾಡುತ್ತಿದ್ದಾರೆ ಎಂದು ನುಡಿಯುತ್ತೇನೆ. ನನ್ನ ತಂದೆ ಮತ್ತು ಚಿಕ್ಕಪ್ಪ ಪಾಪರಾಜುರವರು ಸದರಿಯವರಿಗೆ ಭಾಗಾಂಶದಲ್ಲಿ ಬಂದ ಸ್ವತ್ತನ್ನು ಮೇಲೆ ನಮೂದಿಸಿದ ನರಸರಾಜುರವರಿಗೆ ದಿನಾಂಕಃ 18.01.1992ರಂದು ಕ್ರಯ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಂದೆ ಮತ್ತು ಚಿಕ್ಕಪ್ಪ ಪಾಪರಾಜುರವರು ಸದರಿಯವರಿಗೆ ಭಾಗಾಂಶದಲ್ಲಿ ಬಂದ ಸ್ವತ್ತುಗಳನ್ನು 1ರಿಂದ 5ನೇ ಪ್ರತಿವಾದಿಯರಿಗೆ ಹಾಗೂ ನರಸರಾಜುರವರಿಗೆ ಕ್ರಯ

ಮಾಡಿದ್ದರಿಂದ ನಾವು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಪ್ರಸ್ತುತ ದಾವೆ ದಾಖಲಿಸುವ ಪೂರ್ವದಲ್ಲಿ ದಾವಾ ಸ್ವತ್ತಿನ ಖಾತೆ ನಮ್ಮ ಕುಟುಂಬದ ಮೂಲ ಪುರುಷನಾದ ನರಸರಾಜು ಬಿನ್ ಗೋವಿಂದರಾಜುರವರ ಹೆಸರಿನಲ್ಲಿತ್ತು. 2015ನೇ ಸಾಲಿನಲ್ಲಿ ದಾವಾ ಸ್ವತ್ತಿನ ಖಾತೆ ನಮ್ಮ ಕುಟುಂಬದ ಮೂಲ ಪುರುಷನಾದ ನರಸರಾಜು ಬಿನ್ ಗೋವಿಂದರಾಜುರವರ ಹೆಸರಿನಲ್ಲಿತ್ತು. 2015ನೇ ಸಾಲಿನಲ್ಲಿ ದಾವಾ ಸ್ವತ್ತಿನ ಖಾತೆ 21 ರಿಂದ 25ನೇ ಪ್ರತಿವಾದಿಯರ ಹೆಸರಿನಲ್ಲಿತ್ತು ಎಂದರೆ ಅದನ್ನು ಸೃಷ್ಟಿಸಲಾಗಿರುತ್ತದೆ ಎಂದು ನುಡಿಯುತ್ತೇನೆ. ಸದರಿ ಪಹಣಿ ಅಥವಾ ಹಕ್ಕು ಬದಲಾವಣೆ ವಹಿಯನ್ನು ಯಾವುದಾದರೂ ಸಕ್ಷಮ ಪ್ರಾಧಿಕಾರದ ಸಮಕ್ಷಮ ಪ್ರಶ್ನೆ ಮಾಡಿದ್ದೀರಾ ಎಂದರೆ ಮಾಡಿರುವುದಿಲ್ಲ ಎಂದು ನುಡಿಯುತ್ತೇನೆ. ಸಾಕ್ಷಿ ಸ್ವತಹ ಮುಂದುವರೆದು ಈ ಕುರಿತು ನಮಗೆ 2015ನೇ ಸಾಲಿನಲ್ಲಿ ತಿಳಿದುಬಂದಿರುತ್ತದೆ ಎಂದು ನುಡಿಯುತ್ತಾರೆ. 2015ನೇ ಸಾಲಿನಲ್ಲಿ ದಾವಾ ಸ್ವತ್ತಿನ ಖಾತೆ ನಮ್ಮ ಕುಟುಂಬದ ಮೂಲ ಪುರುಷನಾದ ನರಸರಾಜು ಬಿನ್ ಗೋವಿಂದರಾಜುರವರ ಹೆಸರಿನಲ್ಲಿತ್ತು ಎಂದು ವಾದ ಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಿ.ಡಿ.1 ದಾಖಲೆಯ ಕೋಟಿ ರಾಜುರವರ ಹೆಂಡತಿ ಶಾರದಮ್ಮರವರು ಕೋಟಿ ರಾಜುರವರಿಗೆ ವಿಭಾಗದಲ್ಲಿ ಬಂದ ಸ್ವತ್ತನ್ನು 2 ರಿಂದ 4ನೇ ಪ್ರತಿವಾದಿಯರಿಗೆ ಕ್ರಯ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿ.ಡಿ.1ರಂತೆ ಕ್ರಯಪತ್ರ ಹಾಗೂ ದಿನಾಂಕಃ 18.01.1992ರಂತೆ ಕ್ರಯಪತ್ರಗಳು ಆದ ನಂತರ ದಾವಾ ಸ್ವತ್ತು ಒಟ್ಟು ಕುಟುಂಬದ

ಸ್ವತ್ತಾಗಿ ಉಳಿದಿರುವುದಿಲ್ಲ ಎಂದರೆ ಸರಿಯಲ್ಲ, ದಾವಾ ಸ್ವತ್ತು ಒಟ್ಟು ಕುಟುಂಬದ ಸ್ವತ್ತಾಗಿರುವುದಿಲ್ಲ ಎಂದರೆ ಸರಿಯಲ್ಲ, ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ, ವಾದಿಯರಾದ ನಾವು ದಾವಾ ಸ್ವತ್ತಿನ ಸ್ವಾಧೀನದಲ್ಲಿರುವುದಿಲ್ಲ ಎಂದರೆ ಸರಿಯಲ್ಲ, ಪ್ರತಿವಾದಿಯರು ದಾವೆ ದಾಖಲಿಸಿದ ನಂತರ ರಾಜಿಗೆ ಬರುತ್ತಾರೆ, ರಾಜಿಗೆ ಬಂದಾಗ ಸದರಿಯವರಿಂದ ಹಣವನ್ನು ಪಡೆಯಬಹುದೆಂಬ ದುರುದ್ದೇಶದಿಂದ ಪ್ರಸ್ತುತ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇವೆ ಎಂದರೆ ಸರಿಯಲ್ಲ, ದಾವಾ ಸ್ವತ್ತಿನ ಮೇಲೆ ನಮಗೆ ಯಾವುದೇ ತರಹದ ಹಕ್ಕು ವ ಸ್ವಾಮ್ಯ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.